# First Semester B.C.A. Examination, Jan./Feb. 2026
## (SEP 2025) (Freshers)
## ಕನ್ನಡ ಭಾಷಾ ಪತ್ರಿಕೆ – I
## ಗಣಕ ಕನ್ನಡ – 1

Time : 3 Hours

Max. Marks : 80

I. **ಆರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**40** ಪದಗಳಿಗೆ ಮೀರದಂತೆ). **(6×2=12)**

1) ಯಲ್ಲನು ತನ್ನ ಜೋಳಿಗೆಯಲ್ಲಿ ಕೈ ಹಾಕಿದಾಗ ಏನೇನು ಸಿಕ್ಕಿದವು ?

2) ಕೃಷ್ಣಪ್ಪ ಮತ್ತು ರಾಮಣ್ಣ ಬೇಟೆಯಲ್ಲಿ ಹೇಗೆ ನಿಪುಣರಾಗಿದ್ದರು ?

3) ನಗರದಲ್ಲಿ ಯಾವ ವಾಹನದ ಮೂಲಕ ಬೇಗ ತಲುಪಬಹುದು ?

4) ಆಟಾ ಹಿಟ್ಟಿನ ಮುದ್ದೆ ಯಾವ ರೀತಿ ವಿಸರ್ಜನೆಯಾಗುತ್ತಿತ್ತು ?

5) ಕುಂಕುಮ ಇಲ್ಲದೆ ಗೌಡರ ದೊಡ್ಡಿಗೆ ಹೋದಾಗ ಗೌಡತಿ ಏನು ಹೇಳಿದಳು ?

6) ಜೀತಪದ್ಧತಿ ಎಂದರೇನು ?

7) ಸರಳ ಅವರ ಪಾತ್ರವನ್ನು 'ನಗು' ಪಠ್ಯದ ಹಿನ್ನೆಲೆಯಲ್ಲಿ ಪರಿಚಯಿಸಿ.

8) ಇಸ್ರೇಲಿ ಮಹಿಳೆಯರು ಮೌನ ಪ್ರತಿಭಟನೆಯನ್ನು ಎಲ್ಲೆಲ್ಲಿ ನಡೆಸಿದರು ?

OM SAI COLLEGE
No.....................
Dt.....................
LIBRARY

II. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**80** ಪದಗಳಿಗೆ ಮೀರದಂತೆ). **(4×5=20)**

1) ಇಸ್ಪೀಟ್ ಆಡುವವರು ತಮಗೂ ಹೃದಯ ಅಂಬುದು ಐತಿ ಅಂತ ತೋರಿಸಿದ ಸಂದರ್ಭ ಕುರಿತು ಬರೆಯಿರಿ.

2) ನಮ್ಮ ಊರಿನ ಬೇಟೆಯನ್ನು ಕುರಿತು ಮಾವನ ಹೇಳಿಕೆ ಏನು ?

3) ಎಲೆಕ್ಷನ್‌ಗೆ ನಿಂತ ಶಿವಮ್ಮನ ಬಳಿ ಜನರು ಇಟ್ಟ ಬೇಡಿಕೆಗಳನ್ನು ತಿಳಿಸಿ.

4) ವಿಮೆನ್ ಇನ್ ಬ್ಲಾಕ್ ಲೇಖನದ ಉದ್ದೇಶವನ್ನು ತಿಳಿಸಿ.

5) ಆರ್ಟಿಫಿಷಿಯಲ್ ಇಂಟೆಲಿಜೆನ್ಸಿಯ ಲಾಭಗಳನ್ನು ತಿಳಿಸಿ.

6) ರಾಷ್ಟ್ರೀಯ ಹೆಲ್ಪ್ ಲೈನ್ ಸಂಖ್ಯೆ 1930ರ ಬಗ್ಗೆ ಬರೆಯಿರಿ.

III. ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**160** ಪದಗಳಿಗೆ ಮೀರದಂತೆ). **(3×10=30)**

1) ಹೊಸ ಅಂಗಿಯ ಕಥೆಯಲ್ಲಿ ಯಲ್ಲಾಲಿಂಗನು ಮನೆಯ ಜವಾಬ್ದಾರಿಯನ್ನು ಹೇಗೆ ನಿಭಾಯಿಸಿದನು ? ವಿವರಿಸಿ.

2) ಊರಿನ ಹಂದಿಯನ್ನು ಬೇಟೆಯಾಡಿದ ಪ್ರಸಂಗವನ್ನು ವಿವರವಾಗಿ ಬರೆಯಿರಿ.

3) ಜಾತ್ರೆಗೆ ಹೋದ ಶೂರರು ಕತೆಯ ಸಾರಾಂಶವನ್ನು ಬರೆಯಿರಿ.

4) ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬಳಕೆಯನ್ನು ವಿವರಿಸಿ.

5) ಸುಲಭ ದರದಲ್ಲಿ ಸಿಗುವ ಮೊಬೈಲ್ ಡೇಟಾದ ದುಷ್ಪರಿಣಾಮಗಳೇನು ? ವಿವರಿಸಿ.

OM SAI COLLEGE
No.
Dt.
LIBRARY

IV. ಕಂಪ್ಯೂಟರ್ ಲ್ಯಾಬ್ ಬಳಸಲು ಕೋರಿ ವಿಭಾಗದ ಮುಖ್ಯಸ್ಥರಿಗೆ ಪತ್ರ ಬರೆಯಿರಿ. **(1×5=5)**

V. ನಿಮ್ಮ ಕಾಲೇಜಿನಲ್ಲಿ ನಡೆದ ವಾರ್ಷಿಕ ಸಮಾರಂಭದ ವರದಿಯನ್ನು ರಚಿಸಿ. **(1×5=5)**

VI. ಕೆಳಗೆ ಕೊಟ್ಟಿರುವ ಪಠ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ನೀಡಿ. **(1×4=4)**

ನಮ್ಮ ಊರಿನಿಂದ ಐದಾರು ಕಿ.ಮೀ. ದೂರದಲ್ಲಿ ಹೊಸಕೋಟೆ ಎಂಬ ಊರಿದೆ. ನಮ್ಮ ಹಲವು ನೆಂಟರಿರುವುದು ಅದೇ ಊರಿನಲ್ಲಾದ್ದರಿಂದ ಆ ಊರಿನೊಂದಿಗೆ ಸಂಪರ್ಕ ಚೆನ್ನಾಗಿಯೇ ಇದೆ. ಆ ಊರಿನಲ್ಲಿ ಒಂದು ವಿಶೇಷ ಊರ ಹಬ್ಬ ನಡೆಯುತ್ತದೆ. ಅದರಲ್ಲಿ ಕಾಡು ಹಂದಿಯನ್ನು ಬೇಟೆ ಮಾಡಿಯೇ ಆ ಹಬ್ಬ ಮಾಡುವುದು. ಬೇಟೆ ಆಗಲಿಲ್ಲವೆಂದರೆ ಹಬ್ಬವೇ ಆಗುವುದಿಲ್ಲ. ಊರಿನವರಲ್ಲಿ ಬೇಟೆಯ ಕೌಶಲ್ಯ ಹೊಂದಿದ ಪುರುಷರು ಬೇಟೆ ನಾಯಿಗಳು, ಮಚ್ಚು, ಕುಡುಗೋಲು, ಬಲೆಯನ್ನು ತೆಗೆದುಕೊಂಡು ಬೇಟೆಗೆ ಹೊರಡುತ್ತಾರೆ. ಹೋದವರು ಕಾಡುಹಂದಿ ಬೇಟೆ ಮಾಡಿಕೊಂಡೇ ಬರುತ್ತಾರೆ. ಬೇಟೆ ಮಾಡಿಕೊಂಡು ಬಂದ ಕಾಡುಹಂದಿಯ ನಾಲ್ಕು ಕಾಲುಗಳನ್ನು ಹಗ್ಗದಿಂದ ಕಟ್ಟಿ, ಕಾಲುಗಳ ಮಧ್ಯೆ ಮರದ ಬೊಂಬೊಂದನ್ನು ತೂರಿಸಿ ಅದನ್ನು ಹೊತ್ತುಕೊಂಡು ಊರೆಲ್ಲ ಮೆರವಣಿಗೆ ಮಾಡಿ ದೇವರ ಗುಡಿಯ ಬಳಿ ತಂದು ಪೂಜೆ ಮಾಡಿ ಅದರ ಅಡುಗೆ ಮಾಡಿ ದೇವರಿಗೆ ನೈವೇದ್ಯ ಅರ್ಪಿಸುತ್ತಾರೆ. ಆನಂತರ ಮನೆಗಳಲ್ಲಿ ಮಾರುಕಟ್ಟೆಯಿಂದ ತಂದಿದ್ದ ಮಾಂಸವನ್ನು ಅಡುಗೆ ಮಾಡಿ ನೆಂಟರಿಗೆ ಬಾಡೂಟ ಬಡಿಸುತ್ತಾರೆ. ಮೊನ್ನೆ ಮೊನ್ನೆ ಸಿಕ್ಕಿದ್ದ ನಮ್ಮ ನೆಂಟರಿಷ್ಟರಲ್ಲೊಬ್ಬರಾದ ಸಣ್ಣಣ್ಣ ಹೀಗೆ ಕುಶೋಲೋಪರಿ ಮಾತನಾಡುತ್ತಾ ''ಅಯ್ಯೋ ಇತ್ತೀಚೆಗೆ ಆ ಹಬ್ಬ ಮಾಡೋದೆ ಕಷ್ಟವಾಗಿ ಹೋಗಿದೆ. ಬೇಟೆ ಮಾಡೋಕೆ ಯಾರು ಬರೋಕೆ ಒಪ್ರು. ಬೇಟೆಗೆ ಹೋದ್ರು ಕೂಡ ನಾಕೈದು ದಿವಸ ಆದ್ರು ಬೇಟೆ ಆಗಲ್ಲ. ಜೊತೆಗೆ ಫಾರೆಸ್ಟ್‌ನವರ ಕಾಟ. ಹಾಗಾಗಿ ಹಬ್ಬ ಮಾಡೋದೆ ಕಷ್ಟವಾಗಿದೆ.'' ಎನ್ನುವಾಗ ಅವರ ಕಣ್ಣಲ್ಲಿ ಅದೇನೋ ಕಳೆದುಕೊಂಡ ಭಾವ ಕಾಣುತ್ತಿತ್ತು. ಆ ಊರೇನು ಬುಡಕಟ್ಟು ಊರಲ್ಲದಿದ್ದರು ಬೇಟೆ ಕೇವಲ ಆಟವಾಗ್ತದೆ ಅಥವಾ ಕೇವಲ ಶೋಕಿಯಾಗದೆ ಅದೊಂದು ದೈವಿಕ ಆಚರಣೆಯೇ ಆಗಿದೆ.

ಹಂದಿ ಬೇಟೆ ಅಷ್ಟು ಸುಲಭದ ಮಾತಲ್ಲ. ಅದಕ್ಕಾಗಿಯೇ ತರಬೇತುಗೊಂಡ ನಾಯಿಗಳು ಹಂದಿಯನ್ನು ಬೆನ್ನಟ್ಟಿ ಹಂದಿಯ ಹಿಂಗಾಲುಗಳನ್ನು ಕಚ್ಚಿ ಹಿಡಿದರೆ ಮಚ್ಚು , ಕುಡುಗೋಲಿನಿಂದ ನುರಿತ ಬೇಟೆಗಾರರು ಕಾಡು ಹಂದಿಯನ್ನು ಹೊಡೆದುರುಳಿಸುವ ಕೆಲಸ ಮಾಡುತ್ತಿದ್ದರು. ಧೈರ್ಯಗಾರರೇ ಈ ಕಾಡು ಹಂದಿಯ ಬೇಟೆ ಮಾಡುವುದು. ಬೇಟೆಗಾರ ಅಥವಾ ನಾಯಿ ಏನಾದರೂ ಹಂದಿಗೆ ನೇರವಾಗಿ ಎದುರುಗೊಂಡರೆ ಬೇಟೆಗಾರನ ಕಾಲು ಕಳೆದು ಕೊಂಡಂತೆಯೇ ಅಥವಾ ಬೇಟೆ ನಾಯಿಕತೆ ಮುಗಿತು ಅಂತಲೇ ಅರ್ಥ. ಕೆಲವರು ಜಮೀನಿನ ಬೆಳೆ ರಕ್ಷಣೆಗೆಂದು ಕೋವಿಯನ್ನು ಹೊಂದಿದವರನ್ನು ಬಳಸಿಯೂ ಬೇಟೆ ಮಾಡುತ್ತಿದ್ದರು. ಕಾಡುಹಂದಿ ಬೇಟೆ ಮಾಡುತ್ತಿದ್ದವರು ಊರಲ್ಲಿ ಕೆಲವೇ ಬೇಟೆಗಾರರು ಮಾತ್ರ. ಎಲ್ಲರೂ ಕಾಡುಹಂದಿ ಬೇಟೆ ಮಾಡಲು ಸಾಧ್ಯವಿರಲಿಲ್ಲ. ಉಳುಮೆ ಮಾಡಲು ಎತ್ತುಗಳನ್ನು ಕೊಳ್ಳಲು ದುಡ್ಡಿಲ್ಲ ಎನ್ನುತ್ತಿದ್ದ ಬೇಟೆಗಾರರು ಸಹ ಹಂದಿ ಬೇಟೆಗಾಗಿಯೇ ಮುಧೋಳ ಜಾತಿಯ ಪರಿಣಿತ ನಾಯಿಯನ್ನು ಹತ್ತು ಸಾವಿರದಷ್ಟು ಹಣಕೊಟ್ಟು ಕೊಂಡುಕೊಂಡು ಬರುತ್ತಿದ್ದರು. ಇದು ಬೇಟೆಗಾರರ ಹುಚ್ಚುತನಕ್ಕೆ ಸಾಕ್ಷಿ.

VII. ನಿಮಗೆ ಗೊತ್ತಿರುವ ನಾಲ್ಕು ಗಾದೆಗಳನ್ನು ಬರೆಯಿರಿ. **(1×4=4)**

---

OM SAI COLLEGE
No......................
Dt.......................
LIBRARY